# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:5004/2021** ಪ್ರಾಸಾ-1

ಚಾಸಾ-2

ದಿನಾಂಕ:29-12-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಹೆಸರು | ಗೋಪಾಲ |
| ತಂದೆಯ ಹೆಸರು | ನರಸಿಂಹಯ್ಯ |
| ವಯಸ್ಸು | 24 |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ಕೊಡಿಗೇನಹಳ್ಳಿ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ :-**

ಘಟನೆಗಿಂತ ಸುಮಾರು 5 ವರ್ಷಗಳ ಮುಂಚೆ ನಾನು ಕೊಡಿಗೇನಹಳ್ಳಿಯ ನಂದಿನಿ ವೈನ್ಸ್ ನಲ್ಲಿ ನಾನು ಸಹಾಯಕನಾಗಿ ಕೆಲಸ ಮಾಡುತ್ತಿದ್ದೆ. ಆನಂದ್ ಎಂಬವರು ಅದರ ಮಾಲೀಕರು ಆಗಿದ್ದರು. ನನ್ನ ಜೊತೆ ಹೇಮಂತ, ಅಂಬರೀಷ್, ಕಿರಣ್ ಎಂಬವರು ಕೂಡ ಕೆಲಸ ಮಾಡುತ್ತಿದ್ದರು. ದಿನಾಂಕ:24-09-2020 ರಂದು ರಾತ್ರಿ 09:00 ಗಂಟೆಯ ಸಮಯದಲ್ಲಿ ನಾನು ನಮ್ಮ ವೈನ್ಸ್ ಶಾಪ್‌ನ ಗೇಟ್ ಬಳಿ ನಿಂತಿದ್ದೆ. ಹೇಮಂತ ಮತ್ತು ಕಿರಣ್ ಅಂಗಡಿಯಲ್ಲಿ ಇದ್ದರು. ಆಗ ಗೇಟಿನ ಮುಂದೆ 3 ಜನ ಬಂದು ಬಾಟಲ್ ನಲ್ಲಿ ಬಾಂಬ್ ಅನ್ನು ಗೇಟಿನ ಬಳಿಗೆ ಎಸೆದರು. ಆಗ ಬೆಂಕಿ ಹತ್ತಿಕೊಂಡು ನನ್ನ ಕೈಗೆ, ಕಾಲು ಮತ್ತು ಹೊಟ್ಟೆಗೆ ಬೆಂಕಿ ತಾಗಿತು. ನನ್ನ ಬಟ್ಟೆ ಸುಟ್ಟಿಕೊಂಡಿತು. ಮೈಯೆಲ್ಲಾ ಗಾಯವಾಯಿತು. ಆಗ ಅಂಬರೀಷ್ ಮತ್ತು ಕಿರಣ್

ಮತ್ತು ಇತರರು ಬಂದು ಗೋಣಿ ಚೀಲದಿಂದ ನನಗೆ ತಾಗಿದ ಬೆಂಕಿಯನ್ನು ಆರಿಸಿದರು. ನನ್ನನ್ನು ಆಟೋದಲ್ಲಿ ಕೊಡಿಗೇನಹಳ್ಳಿಯ ಆಸ್ಪತ್ರೆಗೆ ಸಾಗಿಸಿದರು. ಅಲ್ಲಿಂದ ನನ್ನನ್ನು ಮಧುಗಿರಿಯ ಆಸ್ಪತ್ರೆಗೆ ಸಾಗಿಸಿದರು. ಅಲ್ಲಿಂದ ತುಮಕೂರು ಸರ್ಕಾರಿ ಆಸ್ಪತ್ರೆಗೆ ಸಾಗಿಸಿದರು. ಅಲ್ಲಿಂದ ಅದೇ ದಿನ ಬೆಂಗಳೂರಿನ ಕಣ್ವಾ ಆಸ್ಪತ್ರೆ ಸಾಗಿಸಿದರು. ಅಲ್ಲಿಗೆ ಬಾಂಬ್ ಹಾಕಿದವರು ಮಧುಗಿರಿ ಮಲ್ಲೇಶನ ಕಡೆಯವರು ಎಂದು ಗೊತ್ತಾಯಿತು. ನಮ್ಮ ಬಾರಿನ ಮಾಲೀಕರಲ್ಲಿ ಅವನು ಹಣ ಕೇಳಿದ್ದ ಅವರು ಕೊಟ್ಟಿರಲಿಲ್ಲ ಆದ್ದರಿಂದ ಬಾಂಬ್ ಎಳೆದಿದ್ದ ಎಂದು ಗೊತ್ತಾಯಿತು. ನಾನು ಕಣ್ವಾ ಆಸ್ಪತ್ರೆಯಲ್ಲಿ ಇದ್ದಾಗ ಕೊಡಿಗೇನಹಳ್ಳಿ ಠಾಣೆಯ ಪೊಲೀಸರು ಬಂದು ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿದ್ದಾರೆ. ಅದರಲ್ಲಿ ನಾನು ಮೇಲೆ ಹೇಳಿದಂತೆ ಹೇಳಿದ್ದೇನೆ. ಆ ಹೇಳಿಕೆಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ದಿನಾಂಕ:25-09-2020 ರ ಗಾಯಾಳು ಹೇಳಿಕೆಯನ್ನು ಗುರುತಿಸಿ ತನ್ನ ಹೆಬ್ಬೆಟ್ಟನ್ನು ಕೂಡ ಗುರುತಿಸಿದ ಕಾರಣ ಸದರಿ ದಾಖಲೆಯನ್ನು ನಿಪಿ-1 ಎಂದು ಮತ್ತು ಹೆಬ್ಬೆಟ್ಟನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಾನು ಆರೋಪಿಗಳನ್ನು ಠಾಣೆಯಲ್ಲಿ ನೋಡಿಲ್ಲ. ಮತ್ತು ಪೊಲೀಸರ ಮುಂದೆ ಮರು ಹೇಳಿಕೆ ನೀಡಿಲ್ಲ. ಬಾಂಬ್ ಎಸೆದಿದ್ದರಿಂದ ನನಗೆ ಸುಟ್ಟು ಗಾಯವಾಗಿ ಜ್ಞಾನ ಇರಲಿಲ್ಲ ಹಾಗಾಗಿ ಬಾಂಬ್ ಎಸೆದ ಬಾಟಲ್ ಅನ್ನು ಗುರುತಿಸಲು ಆಗಲಿಲ್ಲ. ಬಾಂಬ್ ಹಾಕಿದ ಕಾಲಕ್ಕೆ ನನಗೆ ಬೆಂಕಿ ತಗುಲಿದಾಗ ನಾನು ಧರಿಸಿದ್ದ ಸುಟ್ಟ ಬಟ್ಟೆಯನ್ನು ನೋಡಿದರೆ ಗುರುತಿಸಬಲ್ಲೆ.

**ಸಾಕ್ಷಿ ತನ್ನ ಎರಡೂ ತೋಳು ಮತ್ತು ಹೊಟ್ಟೆಯನ್ನು ತೋರಿಸಿ ಈ ಭಾಗದಲ್ಲಿ ಬಾಂಬ್ ಎಸೆದು ಬೆಂಕಿ ತಗುಲಿ ಗಾಯವಾಗಿರುತ್ತೆ ಎಂದು ನುಡಿಯುತ್ತಾರೆ. ನ್ಯಾಯಾಲಯ ಕೂಡ ಸದರಿ ಗಾಯಗಳನ್ನು ನೋಡಿ ಗುರುತಿಸಿದೆ.**

ನಾನು ಎರಡು ತಿಂಗಳು ಆಸ್ಪತ್ರೆಯಲ್ಲಿ ಒಳ ರೋಗಿಯಾಗಿ ಇದ್ದೆ. ನನಗೆ

ಸುಮಾರು 15 ಲಕ್ಷಕ್ಕಿಂತ ಹೆಚ್ಚು ಆಸ್ಪತ್ರೆಗೆ ಖರ್ಚು ಆಗಿತ್ತು. ನನ್ನಲ್ಲಿ ಸುಮಾರು 8 ರಿಂದ 9 ಲಕ್ಷಕ್ಕೆ ರಶೀದಿ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು)**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**